# ಸಾಕ್ಷಿಯಾತಕ್ಕಾಗಿ



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಯಾಕೋಬ 5:19,20; ಲೂಕ 15:6; ಚೆಫನ್ಯ 3:17; ಯೋಹಾನ 7:37,38 ಮತ್ತು 1 ತಿಮೊಥೆ 2:3,4 ಮತ್ತು 2 ಕೊರಿಂಥ 5:14,15.

**ಸ್ಮರಣವಾಕ್ಯ : "ಹಾಗೆ ಮಾಡುವುದು ನಮ್ಮ ರಕ್ಷಕನಾದ ದೇವರ ಸನ್ನಿಧಿಯಲ್ಲಿ ಮೆಚ್ಚಿಕೆಯಾಗಿಯೂ ಯೋಗ್ಯವಾಗಿಯೂ ಅದೆ. ಎಲ್ಲಾ ಮನುಷ್ಯರು ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬುದು ಆತನ ಚಿತ್ತವಾಗಿದೆ"** 1 ತಿಮೊಥಿ 2:4,5.

ಲೋಕದ ಎಲ್ಲಾ ಕಡೆಯಿರುವ ಎಲ್ಲಾ ಜನರು ತನ್ನ ಪ್ರೀತಿಗೆ ಸ್ಪಂದಿಸಬೇಕು, ತನ್ನ ಕೃಪೆಯನ್ನು ಅಂಗೀಕರಿಸಬೇಕು, ತನ್ನ ಆತ್ಮನಿಂದ ಪರಿವರ್ತನೆ ಹೊಂದಿ ರಕ್ಷಣೆ ಪಡೆದವರಾಗಿ ತನ್ನ ರಾಜ್ಯದಲ್ಲಿ ಸೇರಬೇಕೆಂಬುದನ್ನು ದೇವರು ಅಪಾರವಾಗಿ ಹಂಬಲಿಸುತ್ತಾನೆ. ಆತನಿಗೆ ನಮ್ಮ ರಕ್ಷಣೆಗಿಂತ ಹೆಚ್ಚಿನ ಅಪೇಕ್ಷೆಯು ಯಾವುದೂ ಇಲ್ಲ. ಆತನ ಪ್ರೀತಿಗೆ ಪರಿಮಿತಿಯೇ ಇಲ್ಲ. ಆತನ ಕರುಣೆಯನ್ನು ಅಳೆಯಲಾಗುವುದಿಲ್ಲ. ಆತನ ಕನಿಕರಕ್ಕೆ ಕೊನೆಯೇ ಇಲ್ಲ. ಆತನ ಕ್ಷಮಾಪಣೆಯು ಎಂದಿಗೂ ತೀರಿಹೋಗುವುದಿಲ್ಲ. ಆತನ ಶಕ್ತಿಯು ಅನಂತವಾದದು. ಇತರೆ ದೇವರುಗಳು ಬಲಿಯನ್ನು ಕೇಳುತ್ತವೆ. ಆದರೆ ನಮ್ಮ ದೇವರು ಪರಮಬಲಿಯನ್ನು ಅರ್ಪಿಸಿದ್ದಾನೆ. ನಾವು ತವಕಪಡುವುದಕ್ಕಿಂತ ಹೆಚ್ಚಾಗಿ ದೇವರು ನಮ್ಮ ರಕ್ಷಣೆಗೆ

---

**ಈ ಪಾಠವನ್ನು ಜುಲೈ 4ರ ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.**

ತವಕಿಸುತ್ತಾನೆ. "ಹಾಗೆ ಮಾಡುವುದು ನಮ್ಮ ರಕ್ಷಕನಾದ ದೇವರ ಸನ್ನಿಧಿಯಲ್ಲಿ ಮೆಚ್ಚಿಕೆಯಾಗಿಯೂ ಯೋಗ್ಯವಾಗಿಯೂ ಅದೆ. ಎಲ್ಲಾ ಮನುಷ್ಯರು ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬುದೇ ಆತನ ಚಿತ್ತವಾಗಿದೆ" (1 ತಿಮೊಥೆ 2:4,5). ನನ್ನ ಮತ್ತು ನಿನ್ನ ರಕ್ಷಣೆಯೇ ದೇವರ ಹೃದಯದ ಹಂಬಲವಾಗಿದೆ.

ಸಾಕ್ಷಿಯೆಂಬುದು ಯೇಸುಕ್ರಿಸ್ತನನ್ನು ಕುರಿತು ಹೇಳುವುದಾಗಿದೆ. ಆತನು ನಮ್ಮನ್ನು ರಕ್ಷಿಸಲು ಏನು ಮಾಡಿದ್ದಾನೆ, ನಮ್ಮ ಜೀವಿತದಲ್ಲಿ ಯಾವ ಬದಲಾವಣೆ ತಂದಿದ್ದಾನೆಂಬುದರ ಬಗ್ಗೆ ಹೇಳುತ್ತದೆ?

ಆತನು ಯಾರು? ಮತ್ತು ಆತನ ಗುಣಸ್ವಭಾವದ ಸೌಂದರ್ಯವನ್ನು ಹೇಳುವ ಆತನ ವಾಕ್ಯದಲ್ಲಿರುವ ಅದ್ಭುತ ಸತ್ಯಗಳ ಬಗ್ಗೆ ಸಾಕ್ಷಿಕೊಡಬೇಕಾಗಿದೆ. ಸಾಕ್ಷಿಯು ಯಾತಕ್ಕೆ? ಆತನು ಯಾರೆಂದು ಅರಿತಿರುವಾಗ ಆತನ ಪ್ರೀತಿಯ ಮತ್ತು ಕೃಪೆಯ ಅದ್ಭುತ ಅನುಭವವಾಗಿರುವಾಗ ನಾವು ಮೌನವಾಗಿರಲು ಸಾಧ್ಯವಿಲ್ಲ. ಸಾಕ್ಷಿಯು ಯಾತಕ್ಕೆ? ಯಾಕೆಂದರೆ ಜನರು ಆತನ ಕೃಪೆಯಿಂದ ವಿಮೋಚನೆ ಹೊಂದಿ ಆತನ ಪ್ರೀತಿಯಿಂದ ಪರಿವರ್ತನೆಯಾಗುವಾಗ ಆತನ ಜೊತೆಗಾರರಿಗಿರುವುದರಿಂದ ನಾವು ಸಾಕ್ಷಿ ಕೊಡಬೇಕು.

**ಭಾನುವಾರ** **ಜೂನ್ 28**

## ರಕ್ಷಣೆಗೆ ಅವಕಾಶಗಳನ್ನು ಒದಗಿಸುವುದು

ದೇವರು ಪ್ರತಿನಿತ್ಯವು ಎಲ್ಲಾ ಜನರಿಗೂ ಆತನ ಬಗ್ಗೆ ತಿಳಿದುಕೊಳ್ಳುವ ಅವಕಾಶಗಳನ್ನು ಒದಗಿಸಿಕೊಡುತ್ತಾನೆ. ತನ್ನ ಆತ್ಮನ ಮುಖಾಂತರ ಅವರ ಹೃದಯಗಳಲ್ಲಿ ಸಂಚರಿಸುತ್ತಾನೆ. ಆತನು ಈ ಪ್ರಾಕೃತಿಕ ಪ್ರಪಂಚದ ಸೌಂದರ್ಯದಲ್ಲೂ ಸಂಕೀರ್ಣತೆಯಲ್ಲೂ ತನ್ನನ್ನು ತಾನು ಪ್ರಕಟಿಸಿಕೊಳ್ಳುತ್ತಾನೆ. ಈ ವಿಶ್ವದ ಅಗಾಧತೆ, ಕ್ರಮ ಮತ್ತು ಸಮಾರೂಪತೆಯು ಅನಂತ ದೇವರ ಅಪರಿಮಿತ ಜ್ಞಾನ ಮತ್ತು ಅನಂತಶಕ್ತಿಯ ಬಗ್ಗೆ ಮಾತಾಡುತ್ತದೆ. ಆತನು ನಮ್ಮನ್ನು ತನ್ನ ಕಡೆಗೆ ಸೆಳೆದುಕೊಳ್ಳುವ ಸನ್ನಿವೇಶಗಳನ್ನು ನಮ್ಮ ಜೀವಿತಾವಧಿಯಲ್ಲಿ ಒದಗಿಸಿಕೊಡುತ್ತಾನೆ.

ದೇವರು ತನ್ನನ್ನು ತಾನು ಆತ್ಮನ ಮುಖಾಂತರ, ಮಹಿಮಾಕರ ಪ್ರಕೃತಿ ಮತ್ತು ದೈವತ್ವದ ಕ್ರಿಯೆಗಳಿಂದ ತೋರ್ಪಡಿಸಿಕೊಂಡಿದ್ದಾಗ್ಯೂ ಸ್ಪಷ್ಟವಾದ ರೀತಿಯಲ್ಲಿ

ಆತನ ಪ್ರೀತಿಯು ಪ್ರಕಟಗೊಂಡಿರುವುದು ಯೇಸುಕ್ರಿಸ್ತನ ಜೀವಿತ ಮತ್ತು ಸೇವೆಯಲ್ಲಿಯೇ. ನಾವು ಯೇಸುಕ್ರಿಸ್ತನನ್ನು ಇತರರ ಜೊತೆ ಹಂಚಿಕೊಂಡಾಗ ಅವರಿಗೆ ರಕ್ಷಣೆಯ ಅತ್ಯುತ್ತಮವಾದ ಅವಕಾಶವನ್ನು ಒದಗಿಸುತ್ತೇವೆ.

ಲೂಕ 19:10 ಮತ್ತು ಯಾಕೋಬ 5:19,20 ವಚನಗಳನ್ನು ಹೋಲಿಸಿರಿ. ಯೇಸುಕ್ರಿಸ್ತನು ಯಾವ ಉದ್ದೇಶಕ್ಕೆ ಭೂಮಿಗೆ ಬಂದನೆಂದು ಲೂಕನ ಸುವಾರ್ತೆ ಹೇಳುತ್ತದೆ? ಕೆಟ್ಟುಹೋಗಿರುವವರನ್ನು ಹುಡುಕಿ ರಕ್ಷಿಸುವುದಕ್ಕಾಗಿ ಬಂದ ಯೇಸುವಿನ ಕೆಲಸದಲ್ಲಿ ನಾವು ಹೇಗೆ ಸಹಕಾರಿಗಳಾಗಿರಬಹುದು?

ಯಾಕೋಬನು ಹೇಳುವಂತೆ ಒಬ್ಬನು ಸನ್ಮಾರ್ಗವನ್ನು ತಪ್ಪಿಹೋಗಿರಲಾಗಿ ಮತ್ತೊಬ್ಬನು ಅವನನ್ನು ಸನ್ಮಾರ್ಗಕ್ಕೆ ತಂದರೆ ಅವನ ಪ್ರಾಣವನ್ನು ಮರಣಕ್ಕೆ ತಪ್ಪಿಸಿ ಬಹುಪಾಪಗಳನ್ನು ಮುಚ್ಚಿದವನಾಗುತ್ತಾನೆಂದು ತಿಳಿದುಕೊಳ್ಳಬೇಕು (ಯಾಕೋಬ 5:20).

ರೋಮಾಪುರದವರಿಗೆ ಬರೆದ ಪತ್ರಿಕೆಯು ಈ ಆಲೋಚನೆಯನ್ನು ಇನ್ನೂ ಹಿರಿದು ಮಾಡಿ ಹೇಳುತ್ತದೆ. ರೋಮಾ 1 ಮತ್ತು 2ನೇ ಅಧ್ಯಾಯಗಳು ಅನ್ಯರು ಪ್ರಕೃತಿಯಿಂದ ಬಂದ ದೇವರ ಪ್ರಕಟನೆಗಳನ್ನು ಮತ್ತು ಯೆಹೂದ್ಯರು ಪ್ರವಾದನೆಯಿಂದ ಬಂದ ಪ್ರಕಟನೆಗಳನ್ನು ಹೊಂದಿದ್ದಾಗ್ಯೂ ಕ್ರಿಸ್ತನನ್ನು ಹೊಂದದೆ ಹೋದದುದರಿಂದ ತಮ್ಮನ್ನು ತಾವು ಕಳೆದುಕೊಂಡರು. ರೋಮಾ 3 ರಿಂದ 5 ಅಧ್ಯಾಯಗಳ ಮುಖಾಂತರ ಅಪೊಸ್ತಲನು ರಕ್ಷಣೆಯು ದೇವರ ಕೃಪೆಯಾಗಿದ್ದು ನಾವು ಅದನ್ನು ನಂಬುವುದರಿಂದ ನಮಗೆ ಸಿಗುತ್ತದೆಯೆಂದು ಹೇಳುತ್ತಾನೆ. ರೋಮಾ 6 ರಿಂದ 8 ಅಧ್ಯಾಯಗಳು ಹೇಗೆ ಕೃಪೆಯು ಪಾಪಿಯೊಬ್ಬನಿಗೆ ನೀತಿ ನಿರ್ಣಯಕೊಟ್ಟು ಆತನನ್ನು ಶುದ್ಧೀಕರಣೆ ಮಾಡುತ್ತದೆಯೆಂಬುದನ್ನು ತಿಳಿಸುತ್ತದೆ. ಹತ್ತನೇ ಅಧ್ಯಾಯದಲ್ಲಿ ಕರ್ತನ ನಾಮವನ್ನು ಹೇಳಿಕೊಳ್ಳುವರೆಲ್ಲರಿಗೂ ರಕ್ಷಣೆಯಾಗುತ್ತದೆಯೆಂದು ಹೇಳುತ್ತದೆ (ರೋಮ 10:13). ಆದರೆ ತಾವು ಯಾವುದನ್ನು ನಂಬಲಿಲ್ಲವೋ ಆತನ ನಾಮವನ್ನು ಹೇಳಿಕೊಳ್ಳುವುದು ಹೇಗೆ? ಮತ್ತು ಆತನ ಸುದ್ದಿ ಕೇಳದಿರುವಲ್ಲಿ ಆತನನ್ನು ನಂಬುವುದು ಹೇಗೆ? ದೇವರ

ರಕ್ಷಣಾ ಯೋಜನೆಯಲ್ಲಿ ನಾವೆಲ್ಲರೂ ಕಳೆದುಹೋದವರಿಗೆ ಮಹಿಮೆಯ ಸುವಾರ್ತೆಯನ್ನು ತಲುಪಿಸುವ ದೇವರ ಕೊಂಡಿಗಳಾಗಿದ್ದೇವೆ.

ಜನರು ತಮ್ಮನ್ನು ತಾವು ರಕ್ಷಿಸಿಕೊಳ್ಳುವುದಕ್ಕೆ ನಮ್ಮ ಸಾಕ್ಷಿಯು ಒಂದು ಅವಕಾಶವನ್ನು ಮಾತ್ರವಲ್ಲ ಉತ್ತಮವಾದ ಅವಕಾಶವನ್ನೇ ಕೊಡುತ್ತದೆ. ಮಾನವ ಕುಲವನ್ನು ವಿಮೋಚಿಸುವ ದೇವರ ಯೋಜನೆಯಲ್ಲಿ ನಮ್ಮ ಪಾತ್ರವೇನಾಗಿದೆ? ನಿಮ್ಮ ಸ್ವಂತ ತುಟಿಗಳಿಂದ ಎಷ್ಟು ಜನರು ಸುವಾರ್ತೆಯನ್ನು ಕೇಳಿಸಿಕೊಂಡಿದ್ದಾರೆ? ಎಂಬುದರ ಬಗ್ಗೆಯೂ ಆಲೋಚಿಸಿರಿ.

**ಸೋಮವಾರ** **ಜೂನ್ 29**

## ಯೇಸುಕ್ರಿಸ್ತನನ್ನು ಉಲ್ಲಾಸಪಡಿಸುವುದು

ನಿಮ್ಮ ಕೆಲಸವು ಹೇಗೆ ಸಾಗುತ್ತಿದೆ? ಅಥವಾ ಈ ದಿನ ಎಲ್ಲವೂ ನಿಮ್ಮೊಂದಿಗೆ ಸರಿಯಾಗಿದಿಯೆ? ಎಂಬುದಾಗಿ ಯಾರಾದರೂ ನಿಮಗೆ ಪ್ರಶ್ನೆ ಹಾಕಿದ್ದಾರೆಯೆ? ನೀವು ಈ ಪ್ರಶ್ನೆಗಳನ್ನು ದೇವರಿಗೆ ಕೇಳಿದರೆ ಹೇಗಿರುತ್ತದೆ?

ದೇವರೆ ಈ ದಿನವು ನಿನಗೆ ಹೇಗೆ ಸಾಗುತ್ತಿದೆ? ಯಾವ ತೆರನಾದ ಪ್ರತಿಕ್ರಿಯೆಯನ್ನು ನೀನು ಪಡೆದೆಯೆಂಬುದಾಗಿ ಯೋಚಿಸುವೆ? ಬಹುಶಃ ನಿಮಗೆ ದೇವರಿಂದ ಬರುವ ಉತ್ತರ ಈ ರೀತಿಯಾಗಿರಬಹುದು. ನನ್ನ ದಿನವೂ ಬಹಳವಾಗಿ ಕಷ್ಟಕರವಾಗಿದೆ. ಸುಮಾರು ಒಂದು ಸಾವಿರಕ್ಕೂ ಹೆಚ್ಚು ಜನರು ಹಸಿವೆಯಿಂದಲೂ ಶೀತದಿಂದಲೂ ಅಳುವ ಮಕ್ಕಳಿಂದಲೂ ತುಂಬಿರುವ ಶಿಬಿರವನ್ನು ನೋಡಿ ನನ್ನ ಕಣ್ಣುಗಳಲ್ಲಿ ನೀರು ತುಂಬಿಕೊಂಡಿದೆ. ನಾನು ಪ್ರಪಂಚದ ಜನತುಂಬಿದ ನಗರದ ಬೀದಿ ಬೀದಿಗಳಲ್ಲಿ ನಿರಾಶ್ರಿತರೊಂದಿಗೆ ಅನಾಥರೊಂದಿಗೆ ಅಳುತ್ತಾ ನಡೆದಾಡಿದೆ. ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಹೆಂಗಸರು ಭಯಭೀತರಾದ ಮಕ್ಕಳು ಲೈಂಗಿಕ ದಾಸತ್ವಕ್ಕೆ ಮಾರಲ್ಪಟ್ಟಿರುವುದನ್ನು ಕಂಡು ನನ್ನ ಹೃದಯ ಒಡೆದು ಹೋಯ್ತು. ನಾಶಪಡಿಸುವ ಯುದ್ಧಗಳನ್ನು, ಸರ್ವನಾಶವನ್ನುಂಟು ಮಾಡುವ ನೈಸರ್ಗಿಕ ವಿಪತ್ತುಗಳನ್ನು, ದುರ್ಬಲಗೊಳಿಸುವ ಮರಣಕರವಾದ ಯಾತನಮಯವಾದ ರೋಗಗಳನ್ನು ನೋಡಿದೆನೆಂದು ದೇವರು ಹೇಳುವಾಗ ಹಾಗಾದರೆ ದೇವರೆ ನಿನಗೆ ಯಾವುದಾದರೂ ನಿನ್ನನ್ನು

ಸಂತೋಷಪಡಿಸಿತೆ? ಯಾವುದಾದರೂ ನಿನ್ನನ್ನು ಹಾಡುವಂತೆ ಮಾಡಿತೆ? ಎಂದು ಹಿಂದಿರುಗಿ ಆತನನ್ನು ಕೇಳುತ್ತೀರಾ?

ಓದಿರಿ ಲೂಕ 15:6,7,9,10,22–24 ಮತ್ತು 32 ಈ ಎಲ್ಲಾ ಕಡೆಗಳು ಹೇಗೆ ಅಂತ್ಯಗೊಳ್ಳುತ್ತವೆ ಮತ್ತು ಇವುಗಳ ಅಂತ್ಯವು ನಿಮಗೆ ದೇವರ ಬಗ್ಗೆ ಏನನ್ನು ಹೇಳಿಕೊಡುತ್ತವೆ?

________________________________________

________________________________________

ಕಳೆದುಹೋದವರು ಮತ್ತೆ ಸಿಕ್ಕಿದಾಗ ಇಡೀ ಪರಲೋಕವೇ ಉಲ್ಲಾಸಪಡುತ್ತದೆ. ನಾವು ರಕ್ಷಣೆಯನ್ನು ತರುವ ಸುವಾರ್ತೆಯನ್ನು ಸಾವುನೋವು ರೋಗಗಳು ತುಂಬಿರುವ ಪ್ರಪಂಚದಲ್ಲಿ ಇತರರೊಂದಿಗೆ ಹಂಚಿಕೊಳ್ಳುವಾಗ ದೇವರ ಹೃದಯಕ್ಕೆ ಆನಂದವನ್ನುಂಟು ಮಾಡುತ್ತದೆ. ನಮ್ಮ ಸಾಕ್ಷಿಯು ದೇವರಿಗೆ ಸಂತೋಷ ಕೊಡುತ್ತದೆಯೆಂಬ ಅರಿವು ಕ್ರಿಸ್ತನ ಪ್ರೀತಿಯನ್ನು ಇತರರೊಂದಿಗೆ ಹಂಚಿಕೊಳ್ಳುವಂತೆ ಮಾಡುವ ಒಂದು ದೊಡ್ಡ ಉತ್ತೇಜನಕಾರಿಯಾಗಿದೆ. ನಾವು ಆತನ ಪ್ರೀತಿಯನ್ನು ಪ್ರಕಟಿಸಿದಾಗಲೆಲ್ಲಾ ಪರಲೋಕವು ಸಂಭ್ರಮಿಸುತ್ತದೆ.

ಚೆಫನ್ಯ 3:17 ಓದಿರಿ. ನಾವು ಕರ್ತನ ಕೃಪೆಯನ್ನು ಅಂಗೀಕರಿಸಿಕೊಳ್ಳುವಾಗ ಆತನ ಪ್ರತಿಕ್ರಿಯೆ ಏನಾಗಿರುತ್ತದೆ?

ಈ ದೃಶ್ಯವನ್ನು ಕಲ್ಪಿಸಿಕೊಳ್ಳಿರಿ. ನಿಮ್ಮ ಸಾಕ್ಷಿಯ ಫಲವಾಗಿ ಒಬ್ಬ ಗಂಡಸು ಅಥವಾ ಹೆಂಗಸು, ಒಬ್ಬ ಹುಡುಗ ಇಲ್ಲವೇ ಹುಡುಗಿ ಯೇಸು ಕ್ರಿಸ್ತನನ್ನು ತನ್ನ ಸ್ವಂತ ರಕ್ಷಕನನ್ನಾಗಿ ಸ್ವೀಕರಿಸುತ್ತಾನೆ/ ಸ್ವೀಕರಿಸುತ್ತಾಳೆ. ಆವಾಗ ಪರಲೋಕವೇ ಸಂಭ್ರಮ ಪಟ್ಟು ಒಮ್ಮೆಲೆ ಹಾಡತೊಡಗುತ್ತದೆ. ನಮ್ಮ ಮಹಾಪರಾಕ್ರಮಿಯಾದ ರಕ್ಷಕನು ಆರಕ್ಷಣೆ ಹೊಂದಿದ ವ್ಯಕ್ತಿಯ ಸಲುವಾಗಿ ತಾನೂ ಸಂತೋಷದಿಂದ ಹಾಡುತ್ತಾನೆ. ದುಃಖ ತುಂಬಿದ ಈ ಲೋಕದಲ್ಲಿ ನಮ್ಮ ಸಾಕ್ಷಿಯು ದೇವರಿಗೆ ಸಂತೋಷಕೊಟ್ಟದ್ದಕ್ಕಿಂತಲೂ ಹೆಚ್ಚಿನ ಪ್ರತಿಫಲ ಕೊಡುವಂಥದ್ದು ಬೇರೆ ಯಾವುದಿದೆ?

ಮಂಗಳವಾರ ಜೂನ್ 30

# ಕೊಡುವುದರಿಂದ ಬೆಳೆಯುತ್ತಾ ಹೋಗುವುದು

ಭೂಮಿಯ ಅತಿಕೆಳಮಟ್ಟವು ಮೃತಸಮುದ್ರವಾಗಿದೆ. ಸಮುದ್ರ ಮಟ್ಟಕ್ಕಿಂತ 1388 ಅಡಿಗಳು ಕೆಳಗಿದ್ದು ಪ್ರಪಂಚದ ಅತಿಕೆಳಮಟ್ಟದಲ್ಲಿರುವ ಸಮುದ್ರವಾಗಿದೆ. ಯೋರ್ದನ್ ನದಿಯು ಗಲಿಲಾಯ ಸಮುದ್ರದಿಂದ ಹರಿಯತೊಡಗಿ ಯೋರ್ದನ್ ಕಣಿವೆಯವರೆಗೆ ಸಾಗುತ್ತಾ ಕಡೆಯದಾಗಿ ಮೃತಸಮುದ್ರವನ್ನು ಸೇರುತ್ತದೆ.

ಮರುಭೂಮಿಯ ಸನ್ನಿವೇಶದಲ್ಲಿ ತೀವ್ರವಾದ ಬಿಸಿಲಿನಿಂದ ಉಷ್ಣವೂ ಶುಷ್ಕವೂ ಆದ ಹವಾಗುಣ ಹೊಂದಿರುವ ಪ್ರದೇಶದಲ್ಲಿ ಹರಿಯುವುದರಿಂದ ನೀರು ಬಹಳ ಬೇಗನೆ ಆವಿಯಾಗುತ್ತದೆ. ಮೃತ ಸಮುದ್ರದ ನೀರು ಶೇಕಡ 33.7ರಷ್ಟು ಉಪ್ಪು ಮತ್ತು ಲವಣಾಂಶದಿಂದ ತುಂಬಿರುವುದರಿಂದ ಕೆಲವು ಸೂಕ್ಷ್ಮ ಜೀವಿಗಳು, ಬ್ಯಾಕ್ಟೀರಿಯಗಳು ಸಮುದ್ರ ತಳದಲ್ಲಿರುವುದನ್ನು ಬಿಟ್ಟರೆ ಯಾವ ಸಸ್ಯಗಳೂ ಜಲಚರಗಳೂ ಅಲ್ಲಿ ಬದುಕುಳಿಯಲು ಸಾಧ್ಯವಿಲ್ಲ.

ದೇವರ ಕೃಪೆಯು ಕ್ರೈಸ್ತರಾದ ನಮ್ಮ ಜೀವಿತದಲ್ಲಿ ಹರಿದುಬರುವಾಗ ನಮ್ಮಿಂದ ಇತರರಿಗೆ ಹರಿದು ಹೋಗದೆ ಹೋದರೆ ನಾವು ಮೃತ ಸಮುದ್ರದಂತೆ ಜೀವರಹಿತವಾಗಿ ನಿಂತ ನೀರಾಗಿ ಬಿಡುತ್ತೇವೆ. ಕ್ರೈಸ್ತರಾಗಿ ನಾವು ಹಾಗೆ ಜೀವಿಸಬಾರದು.

ಓದಿರಿ. ಯೋಹಾನ 7:37,38 ಮತ್ತು ಲೂಕ 6:38. ವಿಶ್ವಾಸಿಗಳು ಯೇಸುಕ್ರಿಸ್ತನಿಂದ ಬರುವ ಜೀವಜಲದಿಂದ ಹರಿಯು ಜೀವಕರವಾದ ನೀರುಗಳನ್ನು ಪಡೆಯುವಾಗ ಸ್ವಾಭಾವಿಕವಾದ ಯಾವ ಫಲಿತಾಂಶ ಉಂಟಾಗುತ್ತದೆ?

"ದೇವರು ನಮ್ಮ ಸಹಾಯವಿಲ್ಲದೆ ಪಾಪಿಗಳನ್ನು ರಕ್ಷಿಸುವ ಉದ್ದೇಶವನ್ನು ನೆರವೇರಿಸಬಲ್ಲನು. ಆದರೆ ಕ್ರಿಸ್ತನ ಗುಣಸ್ವಭಾವವನ್ನು ಬೆಳೆಸಿಕೊಳ್ಳಲು ಆತನ ಕೆಲಸದಲ್ಲಿ ಪಾಲುಗಾರರಾಗಿರಬೇಕು. ನಾವು ಆತನು ಪಾಪಿಗಳನ್ನು ರಕ್ಷಿಸುವ

ಸಲುವಾಗಿ ಅರ್ಪಿಸಿದ ಪ್ರಾಯಶ್ಚಿತ್ತ ಯಜ್ಞದಿಂದ ಆತ್ಮಗಳು ವಿಮೋಚಿಸಲ್ಪಡುವ ಸಂತೋಷದಲ್ಲಿ ಪ್ರವೇಶ ಪಡೆದು ಆನಂದಿಸಬೇಕು. ಆತನ ಪ್ರಯಾಸದಲ್ಲಿ ಪಾಲುಗಾರಿಕೆ ಹೊಂದಬೇಕು"– ಎಲೆನ್ ಜಿ ವೈಟಮ್ಮನವರ 'ದಿ ಡಿಸೈರ್ ಆಫ್ ಏಜಸ್' ಪುಟ 142.

"ಯಾರು ಜಯಶಾಲಿಗಳಾಗುತ್ತಾರೋ ಅವರು ತಮ್ಮನ್ನು ತಮ್ಮಿಂದ ಹೊರಗೆಳೆದು ಕೊಳ್ಳಬೇಕು. ಈ ರಕ್ಷಣೆಯ ಮಹಾಕಾರ್ಯವನ್ನು ಸಾಧಿಸುವ ಒಂದೇ ವಿಧಾನವೆಂಬಂತೆ ಇತರರ ರಕ್ಷಣೆಯಲ್ಲಿ ತೀವ್ರವಾದ ಆಸಕ್ತಿಯನ್ನು ತಾಳಿದವರಾಗಿರಬೇಕು" ಎಲೆನ್ ಜಿ ವೈಟಮ್ಮನವರ 'ಫಂಡಮೆಂಟಲ್ಸ್ ಆಫ್ ಕ್ರಿಶ್ಚಿಯನ್ ಎಜುಕೇಷನ್', ಪುಟ 207.

ಯೇಸುಕ್ರಿಸ್ತನು ನಮ್ಮ ಜೀವಿತದಲ್ಲಿ ನಮಗೇನು ಮಾಡಿದ್ದಾನೆಂದು ಇತರರೊಂದಿಗೆ ನಾವು ಹಂಚಿಕೊಳ್ಳುವಾಗ ನಾವು ಬೆಳೆಯುತ್ತೇವೆ. ಕ್ರಿಸ್ತಯೇಸುವಿನಲ್ಲಿ ನಾವು ಸಮಸ್ತವನ್ನು ಪಡೆದುಕೊಂಡಿದ್ದಾಗ್ಯೂ ನಮ್ಮಲ್ಲಿರುವುದನ್ನು ಇತರರೊಂದಿಗೆ ಹಂಚಿಕೊಳ್ಳದಂತೆ ತಡೆಯುವಂಥದ್ದು ನಮ್ಮಲ್ಲಿರುವ ಅತಿಸ್ವಾರ್ಥವಲ್ಲದೆ ಮತ್ತ್ಯಾವುದು? ನಾವು ನಮ್ಮ ನಂಬಿಕೆಯನ್ನು ಇತರರೊಂದಿಗೆ ಹಂಚಿಕೊಳ್ಳದೆ ಹೋದರೆ ಸಮುದ್ರದಂತೆ ಮೃತ ಮಲೆತುನಿಂತ ನೀರಾಗಿಬಿಡುತ್ತೇವೆ.

ಇತರರೊಂದಿಗೆ ಹಂಚಿಕೊಳ್ಳುವ ಸಾಕ್ಷಿಯ ವಿಷಯದಲ್ಲಿ ನಿಮ್ಮ ಜೀವಿತಾನುಭವವೇನು ಇತರರೊಂದಿಗೆ ಪ್ರಾರ್ಥಿಸುವುದೇ ಮತ್ತು ಇತರರ ಅಗತ್ಯಗಳಿಗೆ ತಕ್ಕ ಸೇವೆಯನ್ನು ಮಾಡುವುದೆ? ಈ ಅನುಭವಗಳು ನಿಮ್ಮ ನಂಬಿಕೆಯ ಮೇಲೆ ಮತ್ತು ಕ್ರಿಸ್ತನ ಜೊತೆ ಜೊತೆಯಾಗಿ ನಡೆಯುವ ಜೀವಿತದ ಮೇಲೆ ಯಾವ ಪರಿಣಾಮವನ್ನು ಬೀರುತ್ತದೆ?

**ಬುಧವಾರ** **ಜುಲೈ 31**

## ಯೇಸುಕ್ರಿಸ್ತನ ಆಜ್ಞೆಗೆ ನಂಬಿಗಸ್ತರಾಗಿರುವುದು

ನಾವು ಕ್ರಿಸ್ತನಿಗೆ ನಿಷ್ಠರಾಗಿರಬೇಕೆಂದರೆ ಆತನ ಚಿತ್ತವನ್ನು ನಡೆಸುವುದಕ್ಕೆ ಬದ್ಧರಾಗಿರಬೇಕು. ಇದಕ್ಕಾಗಿ ನಾವು ಆತನ ಆಜ್ಞೆಗಳಿಗೆ ವಿಧೇಯರಾಗುವುದು ಅವಶ್ಯಕವಾಗಿದೆ. ಕಳೆದುಹೋದವರನ್ನು ರಕ್ಷಿಸಬೇಕೆಂದು ಮಿಡಿಯುತ್ತಿರುವ

ಹೃದಯದಲ್ಲಿ ಅದು ಹೊಮ್ಮುತ್ತದೆ. ಕ್ರಿಸ್ತನು ಯಾವ ವಿಷಯಗಳಿಗೆ ಆದ್ಯತೆ ನೀಡುತ್ತಾನೋ ಅವುಗಳಿಗೆ ಆ ಹೃದಯವು ಆದ್ಯತೆಯನ್ನು ನೀಡುತ್ತದೆ.

1 ತಿಮೊಥೆ 2:3,4 ಮತ್ತು 2 ಪೇತ್ರ 3:9 ವಚನಗಳನ್ನು ಓದಿರಿ. ದೇವರ ಚಿತ್ತದ ಬಗ್ಗೆ ಈ ವಾಕ್ಯಗಳು ನಮಗೆ ಏನು ಹೇಳುತ್ತವೆ? ಆತನ ಆದ್ಯತೆಗಳಾವವು?

ದೇವರು ಮನುಷ್ಯರನ್ನು ರಕ್ಷಿಸುವ ವಿಷಯದಲ್ಲಿ ಉತ್ಕಟಭಾವವುಳ್ಳವನಾಗಿದ್ದಾನೆ. ಆತನಿಗೆ ಇದಕ್ಕಿಂತಲೂ ಮುಖ್ಯವಾದ ಕೆಲಸ ಬೇರೆ ಯಾವುದೂ ಇಲ್ಲ. ಎಲ್ಲಾ ಮನುಷ್ಯರು ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬುದು ಆತನ ಚಿತ್ತವಾಗಿದೆ ಮತ್ತು ಹಂಬಲವಾಗಿದೆ (1 ತಿಮೊಥೆ 2:4). "ಯಾವನಾದರೂ ನಾಶವಾಗುವುದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು" ಅಪೇಕ್ಷಿಸುತ್ತಾನೆ (2 ಪೇತ್ರ 3:9). 'ಸೆವೆಂತ್ ಡೇ ಅಡ್ವೆಂಟಿಸ್ಟ್ ಸತ್ಯವೇದ ಅರ್ಥವಿವರಣೆ' ಪುಸ್ತಕವು ಈ ವಚನಭಾಗದಲ್ಲಿ ಬಂದಿರುವ 'ಇಷ್ಟ'ವೆಂಬುದು ಗ್ರೀಕ್ ಪದವಾದ ಬವುಲೋಮಾಯಿ ಪದಕ್ಕೆ ಸಂವಾದಿಯಾಗಿದ್ದು ಇದು ಮನಸ್ಸಿನ ಒಲವು, ಬಯಕೆ ಅಥವಾ ಆಸೆಯನ್ನು ಸೂಚಿಸುತ್ತದೆ.

ಈ ವಚನದಲ್ಲಿ ಯಾವನಾದರೂ (ಯಾವನು+ಆದರೂ) ಎಂಬ ಪದವು ಆದರೂ ಎಂಬುದಕ್ಕೆ ಗ್ರೀಕ್ ಭಾಷೆಯ ಅಲ್ಲ (Alla) ಎಂಬ ಪದವು ಉಪಯೋಗವಾಗಿದೆ. ದೇವರ ಕೆಲವರನ್ನು ರಕ್ಷಿಸಲು ಮತ್ತೆ ಕೆಲವರನ್ನು ನಾಶಮಾಡಲು ಇಷ್ಟಪಡುತ್ತಾನೆ ಎಂಬುದು ದೇವರ ಸ್ವಭಾವವನ್ನು ತಪ್ಪಾಗಿ ಅರ್ಥೈಸುತ್ತದೆ. ಆದುದರಿಂದ ಇವೆರಡಕ್ಕೂ ವ್ಯತ್ಯಾಸವನ್ನು ಎತ್ತಿ ತೋರಿಸಲು ಯಾವನಾದರೂ ಎಂಬುದರ ಜೊತೆಗೆ ಎಲ್ಲರೂ ಎಂಬ ಪದವು ಉಪಯೋಗವಾಗಿದೆ– ಎಸ್.ಡಿ.ಎ ಬೈಬಲ್ ಕಾಮೆಂಟರಿ, ಸಂಪುಟ 7, ಪುಟ 615.

ಪ್ರತಿಯೊಬ್ಬರೂ ರಕ್ಷಣಾಕಾರ್ಯದಲ್ಲಿ ಪಾಲ್ಗೊಂಡು ತನ್ನ ಪ್ರೀತಿಗೆ ಕೃಪೆಗೆ ಮತ್ತು ಸತ್ಯಕ್ಕೆ ಸಾಕ್ಷಿಗಳಾಗಿರಬೇಕೆಂಬ ಕ್ರಿಸ್ತನ ಆದೇಶವು ಸಮಸ್ತ ಮಾನವ ಕುಲವು ರಕ್ಷಣೆ ಹೊಂದಬೇಕೆಂಬ ಆತನ ಅಪೇಕ್ಷೆಯ ಹೊರಹೊಮ್ಮಿಕೆಯಾಗಿದೆ.

ಅಪೋಸ್ತಲರ ಕೃತ್ಯಗಳು 13:47 ಮತ್ತು ಯೆಶಾಯ 49:6 ಈ ವಚನಗಳು ಯಾರಿಗೆ ಅನ್ವಯವಾಗುತ್ತದೆ? ಅಪೋಸ್ತಲನಾದ ಪೌಲನು ಇದನ್ನು ಹೇಗೆ ಉಪಯೋಗಿಸುತ್ತಾನೆ?

ಹಳೆಯ ಒಡಂಬಡಿಕೆಯ ಪ್ರವಾದನೆಯು ಒಂದಕ್ಕಿಂತ ಹೆಚ್ಚು ಸಲ ಅನ್ವಯವಾಗುವುದನ್ನು ಅನೇಕ ಸಂದರ್ಭಗಳಲ್ಲಿ ಕಾಣುತ್ತೇವೆ. ಮೊದಲು ಇಸ್ರಾಯೇಲ್ಯರಿಗೆ ಪ್ರವಾದನೆ ನಂತರ ಕ್ರಿಸ್ತನಿಗೆ ಸೂಚಿತವಾಗಿರುವ ಪ್ರವಾದನೆಯನ್ನು ಅಪೋಸ್ತಲನಾದ ಪೌಲನು ತೆಗೆದುಕೊಂಡು ಮಾತಾಡುತ್ತಾನೆ (ಯೆಶಾಯ 41:8 ಮತ್ತು 49:6 ಮತ್ತು ಲೂಕ 2:32 ನೋಡಿರಿ). ಇದು ಈವಾಗ ಹೊಸ ಒಡಂಬಡಿಕೆಯ ಸಭೆಗೆ ಅನ್ವಯವಾಗುತ್ತದೆ. ಕ್ರಿಸ್ತನ ಆಜ್ಞೆಯನ್ನು ಕನಿಷ್ಠ ಪಡಿಸುವ ಇಲ್ಲವೆ ತಳ್ಳಿಹಾಕುವ ಸಭೆಯು ತನ್ನ ಅಸ್ತಿತ್ವದ ಉದ್ದೇಶದಲ್ಲಿ ವಿಫಲಗೊಂಡು ಲೋಕದಲ್ಲಿ ಅದರ ಪ್ರವಾದನಾತ್ಮಕ ಕರೆಯಿಂದ ತಪ್ಪಿಸಿಕೊಳ್ಳುತ್ತದೆ.

ಒಂದು ಸಭೆಯು ತನ್ನ ಒಳಗಡೆ ಮಾತ್ರ ಗಮನಹರಿಸುವ ತಾನು ಆರಂಭಿಸಬೇಕಾದ ಉದ್ದೇಶವನ್ನು ಮರೆತ ಪಕ್ಷದಲ್ಲಿ ಆ ಸಭೆಗೆ ಇರುವ ಅಪಾಯಗಳೇನು?

**ಗುರುವಾರ** **ಜುಲೈ 2**

## ಪ್ರೀತಿಯಿಂದ ಉತ್ತೇಜನ ಪಡುವುದು

ಈ ವಾರ ನಾವು ಸಾಕ್ಷಿ ಯಾತಕ್ಕೆ ಬೇಕು ಎಂಬ ಪ್ರಶ್ನೆಗೆ ಉತ್ತರ ಕೊಡುವ ಕಡೆಗೆ ಗಮನ ಹರಿಸುತ್ತೇವೆ. ನಾವು ನಮ್ಮ ವಿಶ್ವಾಸವನ್ನು ಇತರರೊಂದಿಗೆ ಹಂಚಿಕೊಂಡಾಗ ಮನುಷ್ಯ ರಕ್ಷಣೆಯ ಕೆಲಸದಲ್ಲಿ ದೇವರೊಂದಿಗೆ ಸಹಕಾರಿಗಳಾಗಿವುದರಿಂದ ನಮಗೆ ಸಂತೋಷ ಸಿಗುತ್ತದೆಯೆಂದು ಕಂಡುಕೊಂಡಿದ್ದೇವೆ. ದೇವರ ಪ್ರೀತಿಯ ಬಗ್ಗೆ ನಾವು ಕೊಡುವ ಸಾಕ್ಷಿಯು ಜನರಿಗೆ ಆತನ ಕೃಪೆ ಮತ್ತು ಸತ್ಯವು ಹೆಚ್ಚು ಸ್ಪಷ್ಟವಾಗಿ ತೋರ್ಪಡುವುದರಿಂದ ಅವರು ರಕ್ಷಣೆ ಹೊಂದುವ ಮಹಾ ಅವಕಾಶಗಳನ್ನು ಅವರಿಗೆ ಒದಗಿಸುತ್ತದೆ.

ಅದೇ ಸಂದರ್ಭದಲ್ಲಿ ನಾವು ಸಾಕ್ಷಿ ಕೊಡುವುದು ನಾವು ಆಧ್ಯಾತ್ಮಿಕವಾಗಿ ಬೆಳೆಯಲು ದೇವರು ಉಪಯೋಗಿಸುವ ಸಾಧನಗಳಲ್ಲಿ ಇದು ಕೂಡ ಒಂದಾಗಿದೆ. ಕ್ರಿಸ್ತನು ನಮಗೆ ಮಾಡಿರುವುದನ್ನು ಇತರರೊಂದಿಗೆ ಹಂಚಿಕೊಳ್ಳುವ ಮತ್ತು ಸೇವೆ ಮಾಡುವ ಕೆಲಸದಲ್ಲಿ ಸೋತುಹೋದರೆ ನಮ್ಮ ನಿಜವಾದ ಆಧ್ಯಾತ್ಮಿಕ ಜೀವನವು ಉಸಿರು ಕಟ್ಟಿ ಸಾಯುತ್ತದೆ.

ನಾವು ಕೊಡುವ ಸಾಕ್ಷಿಯು ಸಮಸ್ತ ಮಾನವರನ್ನು ರಕ್ಷಿಸಲು ಹಂಬಲ ಪಡುವಾತನ ಹೃದಯದ ಜೊತೆ ನಮ್ಮನ್ನು ಸಂಪರ್ಕದಲ್ಲಿಡುತ್ತದೆ. ಸಾಕ್ಷಿಯು ದೇವರು ಕೊಡುವ ಆದೇಶಕ್ಕೆ (ಆಜ್ಞೆಗೆ) ವಿಧೇಯತ್ವದ ಪ್ರತಿಕ್ರಿಯೆಯಾಗಿರುತ್ತದೆ. ಎಲ್ಲಾ ಉತ್ತೇಜನಗಳಿಗಿಂತಲೂ ಹೆಚ್ಚಿನ ಉತ್ತೇಜಕವಾದ ನಮ್ಮ ಸಾಕ್ಷಿಯ ಜೀವಿತದ ಬಗ್ಗೆ ಇಂದಿನ ಪಾಠದ ಅಧ್ಯಯನದಲ್ಲಿ ಶೋಧನೆ ಮಾಡೋಣ.

2 ಕೊರಿಂಥ 5:14, 15 ಮತ್ತು 18 ರಿಂದ 20 ವಚನಗಳನ್ನು ಓದೋಣ. ಪೌಲನು ಶೋಧನೆಗಳು ಮತ್ತು ಕಷ್ಟಸಂಕಟಗಳನ್ನು ಅನುಭವಿಸಲು ಅವನ ಮನಸ್ಸನ್ನು ಯಾವುದು ಹುರಿದುಂಬಿಸಿತು? ಕ್ರಿಸ್ತನ ಸೇವೆಯ ಸನ್ನಾಹಕ್ಕೆ ನಮ್ಮನ್ನೂ ಕೂಡ ಇದು ಹೇಗೆ ಹುರಿದುಂಬಿಸುತ್ತದೆ?

ಅಪೊಸ್ತಲನಾದ ಪೌಲನು ಪ್ರೀತಿಯಿಂದ ಉತ್ತೇಜಿಸಲ್ಪಟ್ಟನು. ನೀವು ಅನೇಕ ಕೆಲಸಗಳನ್ನು ಪ್ರೀತಿಯ ಸಲುವಾಗಿ ಹೊತ್ತುಕೊಂಡು ಮಾಡುವವರಾಗಿರುತ್ತೀರಿ. ಅಪೋಸ್ತಲನಾದ ಪೌಲನು ಕ್ರಿಸ್ತನ ಪ್ರೀತಿಯು ನಮ್ಮನ್ನು ಒತ್ತಾಯಪಡಿಸುತ್ತದೆ ಎಂದು ಅರುಹುವಾಗ ಆತನು ಶಾಶ್ವತವಾದ ಸತ್ಯವನ್ನು ಹೇಳುತ್ತಿದ್ದಾನೆ. ಇಲ್ಲಿ 'ಒತ್ತಾಯ ಪಡಿಸುತ್ತದೆ' ಎಂಬ ಪದವು ಮನವೊಲಿಸು, ಬಲವಂತ ಮಾಡು, ನಿಯಂತ್ರಿಸು ಅಥವಾ ಉತ್ಕಟವಾಗಿ ಉತ್ತೇಜಿಸು ಎಂದು ಅರ್ಥಕೊಡುತ್ತದೆ. ಹಾಗಾಗಿ ಯೇಸುಕ್ರಿಸ್ತನ ಪ್ರೀತಿಯು ಪೌಲನ ಕ್ರಿಯೆಗಳನ್ನು ನಿಯಂತ್ರಿಸಿ ಆತನು ಸಾಕ್ಷಿಕೊಡುವಂತೆ ಉತ್ತೇಜಿಸಿದೆ. ಪೌಲನು ದಿಟ್ಟ ಉದ್ದೇಶದಿಂದಲೂ ಏಕಮನಸ್ಸಿನಿಂದಲೂ ಮೆಡಿಟರೇನಿಯ ಭಾಗದಲ್ಲಿರುವ ಎಲ್ಲಾ ದೇಶಗಳಿಗೆ ರಕ್ಷಣೆಯ ಯೋಜನೆಯನ್ನು ಹಂಚಿದನು.

"ಪ್ರೀತಿಯು ಹೃದಯದಲ್ಲಿ ನೆಲೆಗೊಂಡಿರಬೇಕು. ಒಬ್ಬ ಉತ್ತಮನಾದ ಕ್ರೈಸ್ತನು ತಾನು ನಡೆಸುವ ಉತ್ತಮವಾದ ಕ್ರಿಯೆಗಳಿಗೆ ಬೇಕಾದ ಉತ್ತೇಜನವನ್ನು ತನ್ನ ಯಜಮಾನನಾದ ಕ್ರಿಸ್ತನ ಸಲುವಾಗಿ ಹೃದಯದಲ್ಲಿಟ್ಟಿರುವ ಆಳವಾದ ಪ್ರೀತಿಯಿಂದ ಪಡೆದುಕೊಳ್ಳುತ್ತಾನೆ. ಕ್ರಿಸ್ತನ ಸಲುವಾಗಿರುವ ಅವನ ಒಲವಿನ ಬೇರುಗಳ ಮೂಲಕ ನಿಸ್ವಾರ್ಥವಾದ ಆಸಕ್ತಿಯು ಸಹೋದರರಿಗಾಗಿ ಉಕ್ಕುತ್ತದೆ"– ಎಲೆನ್ ಜಿ ವೈಟಮ್ಮನವರ ದಿ ಅಡ್ವೆಂಟಿಸ್ಟ್ ಹೋಮ್ ಎಂಬ ಪುಸ್ತಕದ ಪುಟ 425.

ನಮಗೋಸ್ಕರ ಕ್ರಿಸ್ತನು ಮಾಡಿದ ಅಗಾಧವಾದ ತ್ಯಾಗವನ್ನು ನಿಜವಾಗಿಯೂ ಕಂಡುಕೊಳ್ಳುವಾಗ ನಾವು ಆತನ ಪ್ರೀತಿಯಿಂದ ಭಾವಪರವಶರಾಗಿ ನಮಗೆ ಮಾಡಿದುದನ್ನು ಇತರರೊಂದಿಗೆ ಹಂಚಿಕೊಳ್ಳುವಂತೆ ಒತ್ತಾಯಿಸಲ್ಪಡುತ್ತೇವೆ.

ಯಾವಾತನು ಸಮಸ್ತವನ್ನು ಸೃಷ್ಟಿಸಿದನೋ (ನಕ್ಷತ್ರಪುಂಜಗಳು ನಕ್ಷತ್ರಗಳು, ದೂತಸಮೂಹ, ಇಡೀ ವಿಶ್ವ ಮತ್ತು ಇತರ ಲೋಕಗಳು) ಅವನೇ ನಮಗಾಗಿ ಶಿಲುಬೆಯ ಮೇಲೆ ಮರಣ ಹೊಂದಿದವನಾಗಿದ್ದಾನೆ. ಚಕಿತಗೊಳಿಸುವ ಈ ಸತ್ಯವು ನಮ್ಮಲ್ಲಿ ದೇವರ ಮೇಲೆ ಪ್ರೀತಿಯನ್ನು ಮತ್ತು ಅದನ್ನು ಹಂಚಿಕೊಳ್ಳುವ ಬಯಕೆಯನ್ನು ಹುಟ್ಟಿಸದಿರಲು ಸಾಧ್ಯವೇ?

**ಶುಕ್ರವಾರ** **ಜುಲೈ 3**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟಮ್ಮನವರ "ಗಾಡ್ಸ್ ಪರ್ಪಸ್ ಫಾರ್ ದಿ ಚರ್ಚ್" ಪುಟ 9–16– ದಿ ಆಕ್ಟ್ಸ್ ಆಫ್ ದಿ ಅಪೋಸ್ತಲ್ಸ್ ಪುಸ್ತಕ ಮತ್ತು "ಗೋ ಟೀಚ್ ಆಲ್ ದಿ ನೇಷನ್ಸ್" ಅಧ್ಯಾಯ ಪುಟ 822–828. "ದಿ ಡಿಸೈರ್ ಆಫ್ ಏಜಸ್" ಪುಸ್ತಕ ಹೊಸ ಒಡಂಬಡಿಕೆಯ ಸಭೆಯು ತನ್ನ ಅಸ್ತಿತ್ವದ ಉದ್ದೇಶವನ್ನು ಅರ್ಥಮಾಡಿಕೊಳ್ಳಲು ವಿಫಲವಾಗುವ ಅಪಾಯವನ್ನು ಎದುರಿಸುತ್ತದೆ. ಎಲೆನ್ ಜಿ ವೈಟಮ್ಮನವರು ಈ ಅಪಾಯವನ್ನು ಹೇಗೆ ವಿವರಿಸುತ್ತಾರೆ. ಯೆರೂಸಲೇಮಿನ ಸಭೆಯ ಮೇಲೆ ಬಂದ ಹಿಂಸೆಯು ಸುವಾರ್ತಾ ಕಾರ್ಯಕ್ಕೆ ದೊಡ್ಡ ಸಂಚಲನೆಯು ಉಂಟಾಗುವಂತೆ ಮಾಡಿತು. ಆ ಸ್ಥಳದಲ್ಲಿ ಸುವಾರ್ತಾ ಸೇವೆಗೆ ಯಶಸ್ಸುದಕ್ಕಿತು, ಅದರ ಪ್ರಯುಕ್ತ ಶಿಷ್ಯರು ಬಹಳ ಕಾಲದವರೆಗೆ ಅಲ್ಲಿಯೇ ಸುಳಿದಾಡಿಕೊಂಡು 'ಲೋಕದ ಕಟ್ಟಕಡೆಯವರೆಗೂ

ಹೊರಟು ಹೋಗಿ ಸುವಾರ್ತೆಯನ್ನು ಸಾರಿರಿ' ಎಂದು ಕ್ರಿಸ್ತನು ಕೊಟ್ಟ ಆದೇಶವನ್ನು ಮರೆತು ಬಿಡುವ ಸಾಧ್ಯತೆಯಿತ್ತು. ಕೆಟ್ಟದ್ದನ್ನು ಪ್ರತಿರೋಧಿಸಲು ಅಗತ್ಯವಾದ ಬಲವು ಬಿರುಸಿನ ಸೇವೆಯನ್ನು (ಸುವಾರ್ತಾ ಸೇವೆ) ಮಾಡುವುದರಿಂದ ಸಿಗುತ್ತದೆ ಎಂಬುದನ್ನು ಮರೆತು ಯೆರೂಸಲೇಮಿನ ಸಭೆಯನ್ನು ವೈರಿಗಳ ಆಕ್ರಮಣದಿಂದ ರಕ್ಷಿಸುವುದಕ್ಕಿಂತ ಹೆಚ್ಚು ಪ್ರಾಮುಖ್ಯವಾದ ಕೆಲಸ ಯಾವುದೂ ಇಲ್ಲವೆಂದು ಯೋಚಿಸ ತೊಡಗುತ್ತಿದ್ದರು. ಸುವಾರ್ತೆಯನ್ನು ಹೊಸದಾಗಿ ಸ್ವೀಕರಿಸದವರು ಅದನ್ನು ಅರಿಯದ ಜನರಿಗೆ ತಿಳಿಸುವುದಕ್ಕೆ ಅಗತ್ಯವಾದ ತರಬೇತನ್ನು ಕೊಡುವ ಬದಲು ತಮಗೆ ಸಿಕ್ಕಿದ ಯಶಸ್ಸು ಸಾಕೆಂದು ತೃಪ್ತಿಪಟ್ಟುಕೊಳ್ಳುವ ಅಪಾಯದ ದಾರಿಯಲ್ಲಿದ್ದರು"– ದಿ ಆಕ್ಟ್ಸ್ ಆಫ್ ಅಪೋಸ್ತಲ್ಸ್ ಪುಸ್ತಕದಲ್ಲಿ 105ನೇ ಪುಟ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಎಲೆನ್ ಜಿ ವೈಟಮ್ಮನವರ ಹೇಳಿಕೆಯ ಕಡೆಯ ಸಾಲಿನಲ್ಲಿ ಎಚ್ಚರಿಕೆಯಿಂದ ಗಮನಿಸಿದಿರಿ. ಇದೇ ರೀತಿಯ ಅಪಾಯ ಸಾಧ್ಯತೆಯ ಬಗ್ಗೆ ಈಗಲೂ ಸಹ ಎಚ್ಚರಿಕೆ ವಹಿಸಬೇಕು ಏಕೆ? ನಿಮ್ಮ ಮುಂದೆ ಸುವಾರ್ತಾ ಸೇವೆಯ ಸವಾಲುಗಳಿರುವ ಸಂದರ್ಭದಲ್ಲಿ ಆ ತೆರನಾದ ಮನಸ್ಥಿತಿ ಬಹಳ ಭಯಂಕರವಾಗಿ ಮತ್ತು ದುರಂತಕರವಾಗಿ ತಪ್ಪಾಗುತ್ತದೆ ಏಕೆ?

2. ಎಲ್ಲಾ ಸುವಾರ್ತಾ ಪತ್ರಿಕೆಗಳೂ ಒಂದೇ ತೆರನಾದ ಆದೇಶ (ಆಜ್ಞೆ)ದಿಂದ ಕೊನೆಗೊಳ್ಳುತ್ತವೆ ಏಕೆ? ಮತ್ತಾಯ 28:18–20; ಮಾರ್ಕ 16:15,16; ಲೂಕ 24:46–49 ಮತ್ತು ಯೋಹಾನ 20:21ನ್ನು ಓದಿರಿ. ಮೊದಲ ಶತಮಾನದ ವಿಶ್ವಾಸಗಳಿಗೆ ಇದು ಯಾವ ಅರ್ಥವನ್ನು ಕೊಡುತ್ತವೆ ಮತ್ತು ಇಂದು ಇವು ನಮಗೆ ಯಾವ ಅರ್ಥವನ್ನು ಕೊಡುತ್ತವೆ?

3. ಸಾಕ್ಷಿಕೊಡುವುದು ಮತ್ತು ಸುವಾರ್ತಾ ಸೇವೆ ಮಾಡುವುದು ಆಧ್ಯಾತ್ಮಿಕತೆಗೆ ಪರ್ಯಾಯವಾಗಲು ಸಾಧ್ಯವಿದೆಯೇ? ಹಾಗಾದರೆ ಈ ಬಲೆಗೆ ಸಿಕ್ಕಿಬೀಳದಂತೆ ಹೇಗೆ ಎಚ್ಚರವಹಿಸಬಲ್ಲೆವು?

4. ತರಗತಿಯಲ್ಲಿ ಮಂಗಳವಾರದ ಪಾಠದ ಕೊನೆಯಲ್ಲಿ ಸಾಕ್ಷಿಯು ಮತ್ತು ಸುವಾರ್ತಾಸೇವೆಯು ನಮ್ಮ ಆಧ್ಯಾತ್ಮಿಕ ಅಭಿವೃದ್ಧಿಯ ಮೇಲೆ ಬೀರುವ

ಪರಿಣಾಮದ ವಿಷಯದಲ್ಲಿ ಕೇಳಿರುವ ಪ್ರಶ್ನೆಯ ಬಗ್ಗೆ ಮಾತಾಡಿರಿ. ಇತರರಿಗೆ ಸಹಾಯವಾಗುವ ಯಾವ ವಿಷಯಗಳನ್ನು ಇಲ್ಲಿ ಕಲಿತುಕೊಂಡಿರಿ? ನಿಮ್ಮ ಯಾವ ತಪ್ಪುಗಳು ಇತರರಿಗೆ ಸಹಾಯ ಮಾಡದಂತೆ ತಡೆದವು?

5. ದೇವರು ನಮ್ಮಲ್ಲಿ ಪ್ರತಿಯೊಬ್ಬರನ್ನೂ ವೈಯಕ್ತಿಕವಾಗಿ ಪ್ರೀತಿಸುತ್ತಾನೆಂಬ ಆಶ್ಚರ್ಯಕರವಾದ ಸಂಗತಿಯುನ್ನು ಆಲೋಚಿಸೋಣ. ಇದರ ಅರ್ಥವೇನೆಂದು ಹೇಗೆ ಅರ್ಥಮಾಡಿಕೊಳ್ಳುತ್ತೀರಿ? ಇದು ಬಹುಶಃ ವಿಶ್ವದಲ್ಲಿ ಬಹಳ ಪ್ರಮುಖವಾದ ಸತ್ಯವಾಗಿದ್ದು ಇದು ನೀವು ಹೇಗೆ ಜೀವಿಸುವಿರಿ ಎಂಬುದರ ಮೇಲೆ ಹೇಗೆ ಪರಿಣಾಮ ಬೀರುತ್ತದೆ?